ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿಗಳು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯಕರ್ನಾಟಕ ದಿನಾಂಕ : DATE : 4/1/2020

ವಿಜ್ಞಾನ ಕಾಂಗ್ರೆಸ್ ಆರಂಭ | ಜನಪರ ಸಂಶೋಧನೆಗೆ ಯುವ ವಿಜ್ಞಾನಿಗಳಿಗೆ ಕರೆ

ಮೋದಿ 2020 ಚಾಲೆಂಜ್

ವಿಕ ಸುದ್ದಿಲೋಕ ಬೆಂಗಳೂರು

ಹೊಸ ವರ್ಷ 2020 ಸ್ವಾಗತಿಸಿ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ 107ನೇ ಸಮ್ಮೇಳನ ಉದ್ಘಾಟಿಸಿರುವ ಪ್ರಧಾನಿ ನರೇಂದ್ರ ಮೋದಿಯವರು ಗ್ರಾಮೀಣಾಭಿವೃದ್ಧಿ, ಸಂಶೋಧನೆ, ಇಂಧನ, ಕಚ್ಚಾತೈಲ ಆಮದು ಪ್ರಮಾಣ ಕಡಿತ ಸೇರಿದಂತೆ ಯುವ ವಿಜ್ಞಾನಿಗಳ ಮುಂದೆ 20 ಸವಾಲು ಇಟ್ಟಿದ್ದಾರೆ.

'ವಿಜ್ಞಾನ ಮತ್ತು ತಂತ್ರಜ್ಞಾನ: ಗ್ರಾಮೀಣಾಭಿವೃದ್ಧಿ' ಎನ್ನುವುದೇ ಈ ಬಾರಿಯ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮ್ಮೇಳನದ ಮಂಥನದ ವಿಷಯವಾಗಿದೆ. ಜ.7ರ ವರೆಗೆ ನಡೆಯುವ ಈ ಸಮ್ಮೇಳನಕ್ಕೆ ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಪ್ರಧಾನಿಯವರು ಶುಕ್ರವಾರ ಚಾಲನೆ ನೀಡಿದರು.

ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯಿಂದ ದೇಶದ ಅಭಿವೃದ್ಧಿಗೆ ಏನೆಲ್ಲ ಪ್ರಯೋಜನವಾಗಿದೆ ಎಂಬುದನ್ನು ವಿವರಿಸಿದ ಅವರು, ಇದು ಇನ್ನಷ್ಟು ಪರಿಣಾಮಕಾರಿಯಾಗಬೇಕು. ವಿಜ್ಞಾನ ಸಂಬಂಧಿ ಸಂಶೋಧನಾ ಚಟುವಟಿಕೆಗಳು ಸುಲಲಿತವಾಗಿ ನಡೆಯಲು (ಈಸ್ ಆಫ್ ಡೂಯಿಂಗ್ ಸೈನ್ಸ್) ಅಗತ್ಯ ನೆರವು ನೀಡಲು ಕೇಂದ್ರ ಸರಕಾರ ಬದ್ಧವಾಗಿದೆ ಎಂಬ ಅಭಯ ನೀಡಿದರು. 'ಜಾಗತಿಕ ಸಂಶೋಧನಾ ಸೂಚ್ಯಂಕ'ದಲ್ಲಿ ಭಾರತದ ರ‍್ಯಾಂಕಿಂಗ್ ವೃದ್ಧಿಸಿದ್ದಕ್ಕೆ ವಿಜ್ಞಾನಿಗಳನ್ನು ಅಭಿನಂದಿಸಿದರು. ಜತೆಗೆ ಕಳೆದ 50 ವರ್ಷಕ್ಕೆ ಹೋಲಿಸಿದರೆ ಕಳೆದ 5 ವರ್ಷದಲ್ಲಿ ತಂತ್ರಜ್ಞಾನ ಆಧರಿತ ಬಿಜನೆಸ್‌ಗೆ ಹೆಚ್ಚಿನ ಸಹಕಾರ ದೊರಕಿದೆ. ಸರಕಾರ ನೀಡಿದ ಕಾರ್ಯಕ್ರಮಗಳೇ ಈ ಸುಧಾರಣೆಗೆ ಕಾರಣವೆಂದು ಸಮರ್ಥಿಸಿಕೊಂಡರು.



ಸಂಶೋಧನೆ-ಪೇಟೆಂಟ್-ಉತ್ಪಾದನೆ-ಸಮೃದ್ಧಿ

''ಭಾರತದ ಯುವ ವಿಜ್ಞಾನಿಗಳು ಸಂಶೋಧನೆ-ಪೇಟೆಂಟ್-ಉತ್ಪಾದನೆ-ಸಮೃದ್ಧಿ ಎಂಬ ಗುರಿಯೊಂದಿಗೆ ಕಾರ್ಯ ನಿರ್ವಹಿಸಬೇಕು. ಸಂಶೋಧನೆಗೆ ಹೆಚ್ಚು ಒತ್ತು ಕೊಡಬೇಕು. ನೀವು ಸಂಶೋಧನೆ ಕೈಗೊಂಡರೆ ಅದಕ್ಕೆ ಪೇಟೆಂಟ್ ಕೊಡಿಸಲಾಗುವುದು. ಆದರಿಂದ ಉತ್ಪಾದನಾ ಚಟುವಟಿಕೆ ನಡೆದು ಸಮೃದ್ಧಿಯಾಗಬೇಕು. ದೇಶದ ಬೆಳವಣಿಗೆ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅವಲಂಬಿಸಿದೆ. ಇದರಿಂದ ನವ ಭಾರತ ನಿರ್ಮಾಣ ಸಾಧ್ಯ. ಮುಂದಿನ ದಶಕದ ಆಡಳಿತವೂ ವಿಜ್ಞಾನ ಮತ್ತು ತಂತ್ರಜ್ಞಾನದ ನೆರವಿನಿಂದಲೇ ನಡೆಯಲಿದೆ,'' ಎಂದು ಹೇಳಿದರು.

ಬೆಂಗಳೂರು ಸ್ಟಾರ್ಟ್‌ಅಪ್ ಹೆಬ್: ಪ್ರಧಾನಿ ಶ್ಲಾಘನೆ

ಗಾರ್ಡನ್ ಸಿಟಿ ಇದೀಗ ನವೋದ್ಯಮದ ಕೇಂದ್ರಸ್ಥಾನವಾಗುತ್ತಿದೆ. ಪ್ರತಿ ಯುವಕರೂ ಬೆಂಗಳೂರಿನೊಂದಿಗೆ ಬಾಂಧವ್ಯ ಬೆಸೆದುಕೊಳ್ಳಲು ಕನಸು ಕಾಣುತ್ತಾರೆ ಎಂದು ಮೋದಿ ಶ್ಲಾಘಿಸಿದರು. ಯುವಜನತೆಯ ಕೊಡುಗೆ ದೇಶಕ್ಕೆ ಸಲ್ಲಬೇಕು ಎಂದು ಕರೆ ನೀಡಿದರು.

ಟಾಪ್ 5 ಸವಾಲು

1 ಪ್ರತಿ ಮನೆಗೂ ಕುಡಿಯುವ ನೀರು ಪೂರೈಸಲು ರೂಪಿಸಲಾದ 'ಜಲ್ ಜೀವನ್' ಯೋಜನೆಗೆ ತಂತ್ರಜ್ಞಾನ ನೆರವು ನೀಡುವಿರಾ?

2 ಮನೆ ಬಚ್ಚಲ ನೀರನ್ನು ಕೃಷಿಗೆ ಉಪಯೋಗಿಸುವ ಸರಳ ತಂತ್ರಜ್ಞಾನ ಕೊಡಬಲ್ಲಿರಾ?

3 ಪ್ಲಾಸ್ಟಿಕ್‌ಗೆ ಪರ್ಯಾಯ ಮಾರ್ಗ ಕಂಡು ಹಿಡಿಯಿರಿ. ಫೈಬರ್, ನಾರು, ಮಣ್ಣಿನ ಬಳಕೆಯಿಂದ ಪರ್ಯಾಯ ವ್ಯವಸ್ಥೆ ಸಾಧ್ಯವೋ ನೋಡಿ.

4 ಸಮುದ್ರದ ಆಳದಲ್ಲಿ ಗಣಿಗಾರಿಕೆ ನಡೆಸಲು ಬೇಕಾದ ತಂತ್ರಜ್ಞಾನ ಕಂಡು ಹಿಡಿಯಬಲ್ಲಿರಾ?

5 ರೈತರು ಬೆಳೆ ಮಾರಾಟ ಸಮಸ್ಯೆ (ಸಪ್ಲೈ ಚೈನ್) ಪರಿಹರಿಸಲು ಪರಿಣಾಮಕಾರಿ ಕ್ರಮ ಹುಡುಕುವಿರಾ?

ಉಳಿದ 15 ಸವಾಲು »02

ರಿಯಲ್ ತರಬೇತಿ ನೀಡುವ ವರ್ಚುಯಲ್ ರಿಯಾಲಿಟಿ ಸ್ಕೋಟಕ ಪತ್ತೆಗೆ ಸೆಂಟ್ರಿಕ್ ರೋಬಾಟ್ »02

7